**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.**

ಸಂಖ್ಯೆ:ವೃ.ಶಿ:ವಿಭಾಗ:ವಿಶ್ವ.ಪ.ದಿನಾಚರಣೆ:01:2016-17 ದಿನಾಂಕ:26ನೇ ಮೇ 2016

## : ಸು ತ್ತೋ ಲೆ :

**ವಿಷಯ**: ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ "ಮಗುವಿಗೊಂದು ಮರ-ಶಾಲೆಗೊಂದು ವನ" ಕಾರ್ಯಕ್ರಮದ ಅನುಷ್ಠಾನದ ಬಗ್ಗೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ 2016-17ನೇ ಸಾಲಿನಲ್ಲಿ ದಿನಾಂಕ:05.06.2016ರಂದು ವಿಶ್ವ ಪರಿಸರ ದಿನಾಚರಣಾ ಆಚರಣೆ ಮೂಲಕ ***"ಮಗುವಿಗೊಂದು ಮರ-ಶಾಲೆಗೊಂದು ವನ"*** ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು. ಕಾರ್ಯಕ್ರಮವು-ವಿಶ್ವ ಪರಿಸರ ದಿನಾಚರಣೆ ದಿನದಿಂದ ಆಗಸ್ಟ್ ಕೊನೆಯವರೆಗೂ ಪ್ರತಿ ವಿದ್ಯಾರ್ಥಿಯಿಂದ ಅಥವಾ ಪ್ರತಿ ವಿದ್ಯಾರ್ಥಿ ತಂಡದಿಂದ ಭವಿಷ್ಯದಲ್ಲಿ ಉಪಯುಕ್ತವಾಗುವಂತಹ ನೆರಳು ಹಾಗೂ ಫಲ ನೀಡುವ ಗಿಡಗಳನ್ನು ನೆಟ್ಟು ಪೋಷಣೆ ಮಾಡುವುದು.

ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಾಲಾ ಆವರಣದಲ್ಲಿ ವಿವಿಧ ರೀತಿಯ ಅಲಂಕಾರಿಕ ಗಿಡಗಳು, ಹೂವಿನಗಿಡಗಳು ಹಾಗೂ ಔಷಧಿ ಗಿಡಗಳನ್ನು ಬೆಳಸಿ ಶಾಲೆಯ ಸೊಬಗು ಹೆಚ್ಚಿಸುವುದು. ಶಾಲಾ ಮೈದಾನದ ಅನುಪಯುಕ್ತ [ಕ್ರೀಡಾ ಮೈದಾನ ಹೊರತುಪಡಿಸಿ] ಜಾಗದಲ್ಲಿ ಸ್ಥಳೀಯ ವಾತಾವರಣಕ್ಕೆ ಅನುಗುಣವಾದ ವಿವಿಧ ರೀತಿಯ ಉಪಯುಕ್ತ ಸಸ್ಯಗಳಾದ ತೆಂಗು, ಮಾವು, ಹಲಸು, ನೇರಳೆ, ಸೀಬೆ, ದಾಳಿಂಬೆ, ನೆಲ್ಲಿ, ಬೇವು, ಅರಳಿ, ಹೊಂಗೆ, ಸಂಪಿಗೆ, ಟೀಕ್, ಅಶೋಕ, ಸರ್ವೆ ಮುಂತಾದ ಅಗತ್ಯವಿರುವ ಸಸ್ಯಗಳನ್ನು ಸಮೀಪದ ಅರಣ್ಯ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗಳಿಂದ ಪಡೆಯುವುದರ ಮೂಲಕ ಶಾಲಾ ಪರಿಸರವನ್ನು ಹಸರೀಕರಣವಿರುವಂತೆ ನೋಡಿಕೊಳ್ಳುವುದು. ಜಾಗದ ಕೊರತೆ ಇರುವ ಶಾಲೆಗಳಲ್ಲಿ ಕುಂಡಗಳಲ್ಲಿ ವಿವಿಧ ರೀತಿಯ ಸಸ್ಯಗಳನ್ನು ಬೆಳಸುವುದು.

ಭೂಮಿಯ ಅವಕಾಶವಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ "ಶಾಲಾ ಕೈತೋಟ" ನಿರ್ಮಿಸುವುದು. ಇದರ ಮಹತ್ವ ಹಾಗೂ ಉಪಯೋಗದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡುವುದು. ಇದರಿಂದ ಬಿಸಿಊಟಕ್ಕೆ ಅಗತ್ಯವಾದ ತಾಜಾ ಸೊಪ್ಪುಗಳು, ಕರಿಬೇವು, ನುಗ್ಗೆ, ತರಕಾರಿಗಳು, ಬಳ್ಳಿ ತರಕಾರಿಗಳನ್ನು ಬೆಳಸಿ ಉಪಯೋಗಿಸುವುದು. ಇದರಿಂದ ವಿದ್ಯಾರ್ಥಿಗಳಲ್ಲಿ ಶ್ರಮದ ಗೌರವ, ಸ್ವಾವಲಂಬನೆ, ಸಮಾಜಿಕ ಕೌಶಲ್ಯ ಹಾಗೂ ಕೆಲಸದ ಕೌಶಲ್ಯಕ್ಕೆ ಪ್ರೋತ್ಸಾಹಿಸುವುದು.

ಈ ಮೇಲ್ಕಂಡ ಅಂಶಗಳ ಅನುಷ್ಟಾನದ ಹಿನ್ನೆಲೆಯಲ್ಲಿ ಶಾಲಾ ಹಂತದಲ್ಲಿ ಶಾಲಾ ಮುಖ್ಯಸ್ಥರು ಶಾಲಾ ಪರಿಸರ ಶಾಲಾ ಶಿಕ್ಷಣದ ಅವಿಭಾಜ್ಯ ಅಂಗವೆಂದು ಭಾವಿಸಿ, ವಿಶೇಷ ಗಮನಹರಿಸುವುದು ತಾಲ್ಲೂಕು / ವಲಯ

ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು [ಆಡಳಿತ] ವಿಶ್ವಪರಿಸರ ದಿನಾಚರಣೆ ಉದ್ಘಾಟನೆ ಮೂಲಕ ಮೇಲ್ವಿಚಾರಣೆ ಮಾಡುವುದು ಸದರಿ ಅಧಿಕಾರಿಗಳು ಈ ಅನುಬಂಧದಲ್ಲಿರುವಂತೆ ಕಾರ್ಯಕ್ರಮದ ಪ್ರಗತಿ ವರದಿಯನ್ನು ಈ ಕಛೇರಿಯ ಹಿರಿಯ ಸಹಾಯಕ ನಿರ್ದೇಶಕರು [ವೃತ್ತಿ ಶಿಕ್ಷಣ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001, ಇವರಿಗೆ ಸಲ್ಲಿಸಲು ತಿಳಿಸಿದೆ.

[ಪಿ.ಸಿ.ಜಾಫರ್]

ಆಯುಕ್ತರು.

***ಇವರಿಗೆ ಮುಂದಿನ ಸೂಕ್ತ ಹಾಗೂ ತುರ್ತು ಕ್ರಮಕ್ಕಾಗಿ:***

*01.* ರಾಜ್ಯದ ಎಲ್ಲಾ ಉಪನಿರ್ದೇಶಕರು [ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ.
*02.* ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ.
*03.* ಆಪ್ತ ಕಾರ್ಯದರ್ಶಿಗಳು, ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು.
*04.* ಹಿರಿಯ ಸಹಾಯಕನಿರ್ದೇಶಕರು[ವೃತ್ತಿ ಶಿಕ್ಷಣ] ಇವರ ಸೂಕ್ತ ಕ್ರಮಕ್ಕಾಗಿ.
*05.* ರಾಜ್ಯದ ಎಲ್ಲಾ ತಾಲ್ಲೂಕು / ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತುರ್ತು ಕ್ರಮಕ್ಕಾಗಿ.
*06.* ರಾಜ್ಯದ ಎಲ್ಲಾ ವಿಷಯ ಪರಿವೀಕ್ಷಕರು[ವೃತ್ತಿ ಶಿಕ್ಷಣ] ಇವರಿಗೆ.

***ಗೌರವಗಳೊಂದಿಗೆ ಪ್ರತಿಯನ್ನು ಮಾಹಿತಿಗಾಗಿ:***

*01.* ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001.
*02.* ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು, ತಮ್ಮ ಇಲಾಖೆಯಿಂದ ವಿವಿಧ ರೀತಿಯ ಸಸಿಗಳನ್ನು ಶಾಲೆಗಳಿಗೆ ಉಚಿತವಾಗಿ ನೀಡಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.
*03.* ನಿರ್ದೇಶಕರು, ತೋಟಗಾರಿಕಾ ಇಲಾಖೆ, ಲಾಲ್‌ಬಾಗ್, ಬೆಂಗಳೂರು. ತಮ್ಮ ಇಲಾಖೆಯಿಂದ ವಿವಿಧ ರೀತಿಯ ಸಸಿಗಳನ್ನು ಶಾಲೆಗಳಿಗೆ ಉಚಿತವಾಗಿ ನೀಡಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.
*04.* ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
*05.* ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಕ್ತ ವ್ಯವಸ್ಥೆಗಾಗಿ.
*06.* ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
*07.* ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಗುಲ್ಬರ್ಗಾ.
*08.* ರಾಜ್ಯದ ಎಲ್ಲಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
*09.* ರಾಜ್ಯದ ಎಲ್ಲಾ ಪ್ರಾಚಾರ್ಯರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ.
*10.* ಮುಖ್ಯಸ್ಥರು, ಜೈವಿಕ ಕೇಂದ್ರ, ಹುಳಿಮಾವು, ಬೆಂಗಳೂರು, ತಮ್ಮ ಇಲಾಖೆ ವತಿಯಿಂದ ಶಾಲೆಗಳಿಗೆ ವಿವಿಧ ರೀತಿಯ ಸಸ್ಯಗಳನ್ನು ಉಚಿತವಾಗಿ ನೀಡಲು ಕೋರಿದೆ.
*11.* ರಾಜ್ಯದ ಎಲ್ಲಾ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
*12.* ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, [ಯೋಜನೆ], ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001.
*13.* ಕಛೇರಿ ಪ್ರತಿ.

\\Typing3server\e\D\Craft\125-2016.doc